**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 22/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಬಸವರಾಜ ಅಡವಿಬಾವಿ** | **ಪಿ.ಡಬ್ಲ್ಯೂ-8** |
| **ತಂದೆಯ/ಗಂಡನ ಹೆಸರು** | **:** | **ಮಲ್ಲಪ್ಪ** | **ಸಿ.ಡಬ್ಲ್ಯೂ-1** |
| **ವಯಸ್ಸು** | **:** | **34 ವರ್ಷ** | |
| **ಉದ್ಯೋಗ** | **:** | **ಪಿ .ಎಸ್. ಐ.ಹಗರಿಬೊಮ್ಮನಹಳ್ಳಿ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 08.07.2025.** |
| **ವಾಸಸ್ಥಳ** | **:** | **ಹಗರಿಬೊಮ್ಮನಹಳ್ಳಿ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಸಂಡೂರು ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ 27.07.2020 ರಿಂದ 02.02.2023 ರವರೆಗೆ ಕೆಲಸ ನಿರ್ವಹಿಸಿರುತ್ತೇನೆ.

ದಿಃ 24-08-2021 ರಂದು ನಾನು ಠಾಣೆಯಲ್ಲಿ ಇದ್ದಾಗ ನನಗೆ ಮಧ್ಯಾಹ್ನ 12.30 ಗಂಟೆಗೆ ಸಂಡೂರು ಪಟ್ಟಣದ ಪುರಸಭೆ ಬಸ್ಸ ನಿಲ್ದಾಣದ ಬಳಿ ಸಾರ್ವಜನಿಕ ಸ್ಥಳದಲ್ಲಿ ಮಟಕಾ ಜುಜಾಟ ನಡೆಯುತ್ತಿದ್ದೆ ಎಂದು ಮಾಹಿತಿ ಬಂದಿರುತ್ತದೆ. ಆಗ ನಾನು ಸದರಿ ಮಾಹಿತಿಯನ್ನು ಚಾಸಾ 2 ರಿಂದ 4 ರವರಿಗೆ ತಿಳಿರಸಿರುತ್ತೇನೆ. ಚಾಸಾ-2 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದರಿಂದ ಚಾಸಾ 2 ರವರು ಪಂಚರಾದ ಚಾಸಾ 6 ಮತ್ತು 7 ರವರನ್ನು ಠಾಣೆಗೆ 12.45 ಗಂಟೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ನಾನು ಅವರಿಗೆ ಮಾಹಿತಿಯನ್ನು ತಿಳಿಸಿದ್ದು ಅವರು ಒಪ್ಪಿದ ನಂತರ ನಾನು, ಪಂಚರು ಹಾಗೂ ಸಿಬ್ಬಂದಿಯವರಾದ ಚಾಸಾ 2 ರಿಂದ 4 ರವರು ಮತ್ತು ಪಂಚರ ಜೊತಗೆಯಲ್ಲಿ ನಾನು ಇಲಾಖಾ ಜೀಪ ನಲ್ಲಿ ಮದ್ಯಾಹ್ನ 1.10 ಗಂಟೆಗೆ ಹೋಗಿದ್ದು ಸ್ವಲ್ಪ ದೂರದಲ್ಲಿ ಜೀಪ ನ್ನು ನಿಲ್ಲಿಸಿ ನಡೆದುಕೊಂಡು ಹೋಗಿ ಮರೆಯಾಗಿ ನೋಡಿದಾಗ ಒಬ್ಬ ವ್ಯಕ್ತಿ ಜನರಿಂದ ಹಣವನ್ನು ಪಡೆದು ಮಟಕಾ ಚೀಟಿಯನ್ನು ಬರೆದುಕೊಳ್ಳುತ್ತಿದ್ದನು ಹಾಗೂ ರೂ.1 ಕ್ಕೆ ರೂ. 80 ಕೊಡುವುದಾಗಿ ಕೂಗಿ ಹೇಳುತ್ತಿದ್ದನು. ನಾವು ಕೂಡಲೇ ದಾಳಿ ಮಾಡಿದಾಗ ಸಾರ್ವಜನಿಕರು ಓಡಿ ಹೋಗಿದ್ದು, ಮಟಕಾ ಚೀಟಿಯನ್ನು ಬರೆಯುತ್ತಿದ್ದ ವ್ಯಕ್ತಿಯನ್ನು ಹಿಡಿದುಕೊಂಡಿರುತ್ತೇವೆ. ಆರೋಪಿಯ

ಹೆಸರು ಶ್ರೀನಿವಾಸ ಶೆಟ್ಟಿ ಎಂದು ತಿಳಿಸಿರುತ್ತಾನೆ. ನಂತರ ಚಾಸಾ 2 ರವರು ಪಂಚರ ಸಮಕ್ಷಮ ಆರೋಪಿಯನ್ನು ಅಂಗಶೋಧನೆ ಮಾಡಲು ಹೋದಾಗ ಆರೋಪಿತ ಏಕೆ ಶೋಧನೆ ಮಾಡುತ್ತಿಯಾ ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡೆಸಿರುತ್ತಾನೆ. ಆ ಸಮಯದಲ್ಲಿ ನಾನು ಆರೋಪಿಯನ್ನು ಸಹಕರಿಸಲು ಹೇಳಿದಾಗ ಆರೋಪಿತ ಚಸಾ-3 ರವರ ಕುತ್ತಿಗೆಯನ್ನು ಹಿಡಿದು ಹೊಡೆಯಲು ಪ್ರಯತ್ನಿಸಿದಾಗ ಚಾಸಾ 2 ರವರು ಆರೋಪಿಯನ್ನು ಹಿಡಿದಿರುತ್ತಾರೆ. ಸದರಿ ಆರೋಪಿಯ ಅಂಗ ಶೋದನೆ ಮಾಡಿದಾಗ ಅವನ ಹತ್ತಿರ ಮಟ್ಕಾ ಚೀಟಿ ಮತ್ತು ಬಾಲ್ ಪೆನ್ ಮತ್ತು ರೂ.1230/- ನಗದು ಹಣ ಸಿಕ್ಕಿರುತ್ತದೆ. ಸದರಿ ಆರೋಪಿ ತನ್ನ ಹತ್ತಿರ ಇತ್ತು ಎಂದು ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಮಧ್ಯಾಹ್ನ 1.30 ರಿಂದ 2.30 ಗಂಟೆಯ ವರೆಗೆ ಪಂಚನಾಮೆಯನ್ನು ಮಾಡಿ, ಪಂಚರ ಸಹಿ ಪಡೆದು, ಮಟ್ಕಾ ಚೀಟಿ, ಬಾಲ್ ಪೆನ್ ಮತ್ತು ನಗದು ಹಣ ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ ವಶಪಡಿಸಿಕೊಂಡ ಮುದ್ದೆಮಾಲು ಮತ್ತು ಆರೋಪಿಯ ಜೊತೆಗೆ ಠಾಣೆಗೆ ಹಿಂದಿರುಗಿ, ಮುಂದಿನ ಕ್ರಮಕ್ಕಾಗಿ ಚಾಸಾ- 14 ರವರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಅದೇ ರೀತಿಯಾಗಿ ನಿಪಿ-2 ರಲ್ಲಿ ಇರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ 1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: 2 ನೇ ಆರೋಪಿ ಪರವಾಗಿ ಶ್ರೀ.ಎ ಹೆಚ್ ಎಸ್ ವಕೀಲರಿಂದ.**

ಘಟನೆ ಸ್ಥಳದಲ್ಲಿ 2 ನೇ ಆರೋಪಿ ಹಾಜರಿರಲಿಲ್ಲ. ನನ್ನ ತನಿಖಾಅವಧಿಯಲ್ಲಿ 2 ನೇ ಆರೋಪಿಯ ಪಾತ್ರದ ಬಗ್ಗೆ ಗೋತ್ತಾಗಿರುವುದಿಲ್ಲ. ಮುದ್ದೆಮಾಲುಗಳ ಮೇಲೆ ಸೀಲ್ಗಳು ಹಾಕಿರುವುದಿಲ್ಲ. ನಾನುಯಾವುದೇ ದಾಳಿಗೆ ಹೋಗಿರುವುದಿಲ್ಲ, ನಾನು ಪಂಚರ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ ಮತ್ತು ಯಾವುದೇ ಮುದ್ದೆಮಾಲು ಜಪ್ತುಪಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಂಕಿ ಸಂಖ್ಯೆಗಾಗಿ ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**